


# ಪ್ಲಾಸ್ಟಿಕ್ ಕಸಕ್ಕೆ ಶಾಲಾಮಕ್ಕಳ ಗುದ್ದು

'ನಿಮ್ಮ ತಿಂಡಿಯಷ್ಟೇ ನಮಗೆ ಸಾಕು, ನಿಮ್ಮ ಕಸ ನಿಮಗೇ ಇರಲಿ' – ಇದು ಹೆಗ್ಗಡಹಳ್ಳಿ ಶಾಲಾಮಕ್ಕಳ ಅಭಿಯಾನ. ಎಲ್ಲ ಮಕ್ಕಳಿಗೂ ಮಾದರಿ ಆಗಬೇಕಾದ ಅಭಿಯಾನ.

ನಂಜನಗೂಡು ತಾಲ್ಲೂಕಿನ ಹೆಗ್ಗಡಹಳ್ಳಿಯ ಸರ್ಕಾರಿ ಶಾಲೆಯಲ್ಲಿ ಇತ್ತೀಚೆಗೆ ನಡೆದ 'ಬಣ್ಣದಮೇಳ'ದಲ್ಲಿ ಪ್ಲಾಸ್ಟಿಕ್ ವಿರೋಧಿ ದನಿಯೂ ಮೊಳಗಿತು. ಧ್ವನಿ ಸಣ್ಣದಿರಬಹುದು, ಆದರದು ಗಮನಾರ್ಹ. 'ನಾಳೆಗಳು ನಮ್ಮವು' ಎನ್ನುವ ಧ್ಯೇಯವಾಕ್ಯದೊಂದಿಗೆ ಮಕ್ಕಳು ಪ್ಲಾಸ್ಟಿಕ್ ಬಗ್ಗೆ ತಮ್ಮದೇ ಆದ ರೀತಿಯಲ್ಲಿ ಪ್ರತಿರೋಧ ವ್ಯಕ್ತಪಡಿಸಿದರು.

ರುಚಿ ರುಚಿಯಾದ ಮಕ್ಕಳ ತಿಂಡಿಗಳನ್ನು ದೇಶದಲ್ಲಿ ಹಲವಾರು ಕಂಪನಿಗಳು ಉತ್ಪಾದಿಸುತ್ತವೆ. ನಗರ ಮಾತ್ರವಲ್ಲದೆ, ಪುಟ್ಟ ಹಳ್ಳಿಗಳಲ್ಲೂ ಬಣ್ಣ ಬಣ್ಣದ ಪ್ಲಾಸ್ಟಿಕ್ ಕವರುಗಳಲ್ಲಿ ತುಂಬಿರುವ ಈ ತಿನಿಸುಗಳು ಮಕ್ಕಳನ್ನು ಆಕರ್ಷಿಸುತ್ತವೆ. ಅಂಗಡಿಗಳ ಮುಂದೆ ತಿಂಡಿಯ ಕವರುಗಳು ಮಾಲೆಗಳಂತೆ ಜೋತುಬಿದ್ದಿರುತ್ತವೆ. ಚೆಣ್ಣರು ತಿನಿಸನ್ನು ಬೇಡ ಎನ್ನುವುದುಂಟೆ? ತಿಂಡಿ ನಮಗಿರಲಿ, ಆದರೆ ಅದರಿಂದ ಉಂಟಾಗುವ ಕಸ ಬೇಡ ಎನ್ನುವುದು ಮಕ್ಕಳ ಚಿಂತನೆ.

ತಿಂಡಿಗಳನ್ನು ಪ್ಯಾಕ್ ಮಾಡಿರುವ ಕವರುಗಳು ನಮ್ಮೂರಿನಲ್ಲಿ ಕಸವಾಗಿ ಉಳಿಯುತ್ತವೆ ಎನ್ನುವುದನ್ನು ವಿದ್ಯಾರ್ಥಿಗಳು 'ಬಣ್ಣದಮೇಳ'ದಲ್ಲಿ ತಿಳಿದುಕೊಂಡರು. ಸರಿ, ಈ ಕಸವನ್ನು ತೊಲಗಿಸುವುದು ಹೇಗೆ? ಶಿಕ್ಷಕರ ಜೊತೆ ಚರ್ಚೆ ಮಾಡಿದ ಮಕ್ಕಳಿಗೆ ಹೊಳೆದ ಐಡಿಯಾ 'ನಿಮ್ಮ ಕಸ ನಿಮಗೆ' ಎನ್ನುವುದು. ತಿಂಡಿಗಳನ್ನು ತಯಾರಿಸುವ ಪ್ರಖ್ಯಾತ ಕಂಪನಿಗಳ ವಿಳಾಸಕ್ಕೆ, ಅವರದೇ ತಿಂಡಿಗಳ ಕವರುಗಳನ್ನು ಹೆಕ್ಕಿ ಲಕೋಟೆಯಲ್ಲಿಟ್ಟು ಮಕ್ಕಳು ಕೊರಿಯರ್ ಮಾಡಿದರು. ಜೊತೆಗೆ, 'ನಿಮ್ಮ ತಿಂಡಿಯಷ್ಟೇ ನಮಗೆ ಸಾಕು, ನಿಮ್ಮ ಕಸ ನೀವೇ ವಾಪಾಸು ಪಡೆದು ಮರುಬಳಕೆ ಮಾಡಿ. ನಮ್ಮ ಸುಂದರ ನಾಳೆಯನ್ನು ಉಳಿಸಿಕೊಡಲು ಕೈಜೋಡಿಸಿ' ಎನ್ನುವ ಪತ್ರ ಇರಿಸಿದರು. ಈ ಪತ್ರಕ್ಕೆ ತೊಂಬತ್ತು ಮಕ್ಕಳು ಸಹಿ ಮಾಡಿದ್ದಾರೆ. ಸುಂದರ ನಾಳೆಗಳಿಗಾಗಿ ಮಕ್ಕಳನ್ನು ಸಂಘಟಿಸುತ್ತಿರುವ ಸ್ವೀಡನ್ ದೇಶದ ಗ್ರೇಟಾ ಟುನ್‌ಬರ್ಗ್ ಎನ್ನುವ ಹದಿನಾರರ ಬಾಲೆ ಹೆಗ್ಗಡಹಳ್ಳಿ ಶಾಲೆಯ ಮಕ್ಕಳ ಈ ಅಭಿಯಾನಕ್ಕೆ ಪ್ರೇರಣೆ.

> 'ನಮ್ಮ ನಾಳೆಗಳಿಗೆ ಪ್ಲಾಸ್ಟಿಕ್ ಕೊಳೆ ಬೇಡ, ಸುಂದರ ಪರಿಸರ ಉಳಿಸಿಕೊಡಿ' ಎನ್ನುವುದು ಶಾಲಾಮಕ್ಕಳ ಆಗ್ರಹ. ನಾಡಿನ ಉಳಿದ ಮಕ್ಕಳೂ ದನಿಗೂಡಿಸುವಷ್ಟು ಅರ್ಥಪೂರ್ಣವಾಗಿದೆ ಈ ವಿಶಿಷ್ಟ ಅಭಿಯಾನ.

ಕುರುಕಲು ತಿಂಡಿಗಳ ತಯಾರಿಕಾ ಸಂಸ್ಥೆಗಳಿಗೆ ಮಾತ್ರವಲ್ಲ – ತಾವು ನಡೆಸುತ್ತಿರುವ ಈ ಅಭಿಯಾನದ ಕುರಿತು ಮುಖ್ಯಮಂತ್ರಿಗಳಿಗೂ ಶಾಲಾಮಕ್ಕಳು ಪತ್ರ ಬರೆದಿದ್ದಾರೆ. 'ನಮ್ಮ ನಾಳೆಗಳಿಗೆ ಪ್ಲಾಸ್ಟಿಕ್ ಕೊಳೆ ಬೇಡ, ಸುಂದರ ಪರಿಸರ ಉಳಿಸಿಕೊಡಿ' ಎಂದು ರಾಜ್ಯದ ಮುಖ್ಯಮಂತ್ರಿಗಳನ್ನು ಮಕ್ಕಳು ಆಗ್ರಹಿಸಿದ್ದಾರೆ. ಪರಿಸರ ಜಾಗೃತಿಗಾಗಿ ಊರೊಳಗೆ ಘೋಷಣೆಗಳನ್ನು ಕೂಗುತ್ತಾ ಮೆರವಣಿಗೆಯಲ್ಲಿ ಸಾಗಿದ್ದಾರೆ. ಊರಿನ ಬೀದಿಗಳಲ್ಲಿ ಪ್ಲಾಸ್ಟಿಕ್ ಕಸ ಹಾಕಲು ಕಸದ ಡಬ್ಬಿಗಳನ್ನು ಸ್ಥಾಪಿಸಿ ಎಂದು ಗ್ರಾಮಪಂಚಾಯತ್ ಅಭಿವೃದ್ಧಿ ಅಧಿಕಾರಿಗೆ ಮನವಿಯನ್ನೂ ಮಾಡಿದ್ದಾರೆ.

ಹೆಗ್ಗಡಹಳ್ಳಿ ಶಾಲೆಯ ನಾಟಕದ ಮೇಷ್ಟ್ರು ಸಂತೋಷ ಗುಡ್ಡಿಯಂಗಡಿ ಹಾಗೂ ಬಂಡೀಪುರದ ಪರಿಸರ ಕಾರ್ಯಕರ್ತ ಶ್ರೀಕಂಠ, ಕಾರ್ತಿಕ್ ಅವರು ಮಕ್ಕಳ ಅಭಿಯಾನವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಇಂಥ ಅಭಿಯಾನಗಳು ದೇಶದ ಎಲ್ಲೆಡೆ ನಡೆದರೆ ಒಳ್ಳೆಯದಲ್ಲವೆ? ಮಕ್ಕಳ ಧ್ವನಿ ಒಟ್ಟಾಗಿ ಮೊಳಗಿದರೆ ದೇಶದ ನೀತಿನಿರೂಪಕರ ಕಿವುಡುತನ, ಕುರುಡುತನ ಕಳೆದುಹೋದೀತು. ■